ಕರ್ನಾಟಕ ವಿಧಾನ ಸಭೆ
KARNATAKA LEGISLATIVE ASSEMBLY

ಶಂಕ್ರವಾರ, ದಿನಾಂಕ ೨೭ನೇ ಮೇ ೧೯೮೮/ಜ್ಯೇಷ್ಠ ೬, ೧೯೧೦ ಶಕ

ಸದನವು ವಿಧಾನ ಸೌಧದಲ್ಲಿರುವ ವಿಧಾನ ಸಭೆಯ ಸಭಾಂಗಣದಲ್ಲಿ
ಬೆಳಿಗ್ಗೆ ೯-೧೦ ಗಂಟೆಗೆ ಸಮಾವೇಶಗೊಂಡಿತು.

[ಅಧ್ಯಕ್ಷರು (ಶ್ರೀ ಬಿ. ಜಿ. ಬಣಕಾರ್) ಅವರು ಪೀಠವನ್ನಲಂಕರಿಸಿದರು.]

ಚುಕ್ಕೆ ಗುರುತಿನ ಪ್ರಶ್ನೆಗಳಿಗೆ ಬಾಯಿ ಮಾತಿನ ಮೂಲಕ ನೀಡಲಾದ ಉತ್ತರಗಳು

ಕರ್ನಾಟಕ ರಾಜ್ಯ ಸಹಕಾರಿ ಅಪೆಕ್ಸ್ ಬ್ಯಾಂಕ್ ನೌಕರ ವರ್ಗದ ಬಗ್ಗೆ.

೨೨೪. ಶ್ರೀ ಶಿವಶೇಖರಪ್ಪಗೌಡ ಶಿರವಾಳ್ (ಶಹಾಪುರ).—ಮಾನ್ಯ ಸಹಕಾರ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ ?

ಅ) ಕರ್ನಾಟಕ ರಾಜ್ಯ ಸಹಕಾರಿ ಅಪೆಕ್ಸ್ ಬ್ಯಾಂಕಿನಲ್ಲಿರುವ ನೌಕರರ ಸಂಖ್ಯೆ ಎಷ್ಟು ? (ವರ್ಗವಾರು ವಿವರ ನೀಡುವುದು.)

ಆ) ಈ ಪೈಕಿ ಹೈದರಾಬಾದು ಕರ್ನಾಟಕದ ಪ್ರದೇಶಗಳಿಂದ ನೇಮಕ ಹೊಂದಿರುವವರ ಸಂಖ್ಯೆ ಎಷ್ಟು ?

ಇ) ಈಗಿರುವ ನೌಕರ ವರ್ಗದ ಪೈಕಿ ಜಿಲ್ಲಾವಾರು ಅಸಮಾನತೆ ಇದೆಯೇ (ಜಿಲ್ಲಾವಾರು ವಿವರ ನೀಡುವುದು.)

ಈ) ಮುಂದಿನ ನೇಮಕಾತಿಗಳಲ್ಲಿ ಈ ಅಸಮಾನತೆಯನ್ನು ನಿವಾರಿಸಲು ಸರ್ಕಾರದವರು ಕೈಗೊಳ್ಳುವ ಕ್ರಮವೇನು ?

ಶ್ರೀ ಹೆಚ್. ಏಕಾಂತಯ್ಯ (ಸಹಕಾರ ಸಚಿವರು).—

ಅ) ಕರ್ನಾಟಕ ರಾಜ್ಯ ಸಹಕಾರಿ ಅಪೆಕ್ಸ್ ಬ್ಯಾಂಕಿನಲ್ಲಿ ಈಗಿರುವ ಒಟ್ಟು ನೌಕರರ ಸಂಖ್ಯೆ: ೩೯೯ ಅದರ ವರ್ಗವಾರು ವಿವರ ಕೆಳಗಿನಂತಿದೆ.

೧) ಅಪರ ಕಾರ್ಯದರ್ಶಿ	೦೧
೨) ಪ್ರಧಾನ ವ್ಯವಸ್ಥಾಪಕರು	೦೨
೩) ಉಪ ಪ್ರಧಾನ ವ್ಯವಸ್ಥಾಪಕರು	೧೨
೪) ಸಹಾಯಕ ಪ್ರಧಾನ ವ್ಯವಸ್ಥಾಪಕರು	೧೯
೫) ವ್ಯವಸ್ಥಾಪಕರು	೪೧
೬) ಲೆಕ್ಕಾಧಿಕಾರಿಗಳು	೬೩
೭) ಗುಮಾಸ್ತರು, ಶೀಘ್ರಲಿಪಿಗಾರರು, ಬೆರಳಚ್ಚುಗಾರರು	೧೫೫
೮) ಸ್ಟೇಟ್‌ಮೆಂಟ್ ರೈಡರ್ಸ್	೦೮
೯) ಜವಾನರು	೯೮
ಒಟ್ಟು	೩೯೯

ಆ) ಬ್ಯಾಂಕಿನ ಒಟ್ಟು ಸಿಬ್ಬಂದಿ ನೌಕರರ ಪೈಕಿ ಹೈದರಾಬಾದ್ ಕರ್ನಾಟಕ ಪ್ರದೇಶಗಳಿಂದ ನೇಮಕ ಹೊಂದಿರುವವರ ಸಂಖ್ಯೆ: ೧೩.

ಇ) ನೇಮಕಾತಿಯನ್ನು ಜಾರಿಯಲ್ಲಿರುವ ನೇಮಕಾತಿ ಹಾಗೂ ಮೀಸಲಾತಿ ನಿಯಮಗಳ ಪ್ರಕಾರ ಮಾಡುವುದರಿಂದ ಜಿಲ್ಲಾವಾರು ನೇಮಕ ಮಾಡುವ ಪ್ರಶ್ನೆ ಉದ್ಭವಿಸುವುದಿಲ್ಲ.

ಈ) ಉದ್ಭವಿಸುವುದಿಲ್ಲ.

ಶ್ರೀ ಶಿವಶೇಖರಪ್ಪಗೌಡ ಶಿರವಾಳ್.—ಸನ್ಮಾನ್ಯ ಅಧ್ಯಕ್ಷರೆ, ಸನ್ಮಾನ್ಯ ಸಚಿವರು ಕರ್ನಾಟಕ ರಾಜ್ಯ ಸಹಕಾರಿ ಅಪೆಕ್ಸ್ ಬ್ಯಾಂಕಿನಲ್ಲಿ ಒಟ್ಟು ೩೯ ನೌಕರರಿದ್ದಾರೆ, ಅವರ ಪೈಕಿ ಹೈದರಾಬಾದ್ ಕರ್ನಾಟಕ ಪ್ರದೇಶಗಳಿಂದ ಕೇವಲ ೧೩ ಜನರನ್ನು ತೆಗೆದುಕೊಂಡಿರುವುದಾಗಿ ಹೇಳಿದ್ದಾರೆ. ಆಮೇಲೆ ನೇಮಕಾತಿಯನ್ನು ಜಾರಿಯಲ್ಲಿರುವ ನೇಮಕಾತಿ ಹಾಗೂ ಮೀಸಲಾತಿ ನಿಯಮಗಳ ಪ್ರಕಾರ ಮಾಡುವುದರಿಂದ ಜಿಲ್ಲಾವಾರು ನೇಮಕ ಮಾಡುವ ಪ್ರಶ್ನೆ ಉದ್ಭವಿಸುವುದಿಲ್ಲ ಎಂದು ಹೇಳಿದ್ದಾರೆ. ಈ ತಾರತಮ್ಯ ಏಕೆ ? ಒಟ್ಟು ೩೯ ಜನರಲ್ಲಿ ಹೈದರಾಬಾದ್ ಕರ್ನಾಟಕ ಪ್ರದೇಶದಿಂದ ಕನಿಷ್ಟ ೫೦ ಜನರನ್ನಾದರೂ ನೇಮಕಾತಿ ಮಾಡತಕ್ಕಂಥ ವ್ಯವಸ್ಥೆಯಾಗಬೇಕು. ಮುಂದಿನ ನೇಮಕಾತಿಗಳಲ್ಲಿ ಈ ಅಸಮಾನತೆಯನ್ನು ನಿವಾರಿಸಲು ಸರ್ಕಾರದವರು ಕೈಗೊಳ್ಳುವ ಕ್ರಮವೇನು ಎಂದೂ ಕೇಳಿದ್ದಕ್ಕೆ ಈ ಪ ಶ್ನೆ ಉದ್ಭವಿಸುವುದಿಲ್ಲ ಎಂದು ಹೇಳಿದ್ದಾರೆ. ಇನ್ನು ಮುಂದಾದರೂ ಅಸಮಾನತೆಯನ್ನು ನಿವಾರಿಸಲು ಹೈದರಾಬಾದ್ ಕರ್ನಾಟಕ ಪ್ರದೇಶದಿಂದ ಹೆಚ್ಚು ಜನರನ್ನು ನೇಮಕಾತಿ ಮಾಡಬೇಕು ಎಂದೂ ಕೇಳಿಕೊಳ್ಳುತ್ತೇನೆ.

ಶ್ರೀ ಹೆಚ್. ವಿಶ್ವಾಂತಯ್ಯ.—ಪ್ರಾದೇಶಿಕ ಅಸಮಾನತೆಯ ತೊಡಕನ್ನು ಹೋಗಲಾಡಿಸಲು ಮಾನ್ಯ ಸದಸ್ಯರು ಏನು ಸೂಚನೆಯನ್ನು ಕೊಡುತ್ತಾರೆ ಅದನ್ನು ಪರಿಶೀಲಿಸುತ್ತೇನೆ.

ಶ್ರೀ ಎಂ. ಮಲ್ಲಿಕಾರ್ಜುನ ಖಾರ್ಗೆ.—ಇದರ ಬಗ್ಗೆ ಕಡಪಟ್ಟಿಯವರ ಕಮಿಟಿ ಇದೆ, ಆ ಕಮಿಟಿಯವರು ಒಂದು ರಿಪೋರ್ಟ್‌ನ್ನು ಈಗಾಗಲೇ ಕೊಟ್ಟಿದ್ದಾರೆ ಎಂದು ಗೊತ್ತಾಗಿದೆ. ಅಟ್‌ಲೀಸ್ಟ್ ಆ ರಿಪೋರ್ಟ್‌ನ್ನು ನೋಡಿಕೊಂಡು ಅದನ್ನು ಇಂಪ್ಲಿಮೆಂಟ್ ಮಾಡುತ್ತೀರಾ ? ಏಕೆಂದರೆ, ರೀಜನಲ್ ಇಂಬ್ಯಾಲೆನ್ಸ್‌ನ್ನು ಹೋಗಲಾಡಿಸಲು ರೆಕ್ರೂಟ್‌ಮೆಂಟ್‌ನಲ್ಲಿ ಆದ್ಯತೆ ಕೊಟ್ಟಿಲ್ಲ. ತಮಗೆ ಗೊತ್ತಿದ ಹಾಗೆ, ಪರ್ಟಿಕ್ಯುಲರ್ಲಿ ಕೋ-ಆಪರೇಟೀವ್ ಅಪೆಕ್ಸ್ ಬ್ಯಾಂಕ್ ಆಗಲಿ, ಲ್ಯಾಂಡ್ ಮಾರ್ಟ್‌ಗೇಜ್ ಬ್ಯಾಂಕ್ ಆಗಲಿ ಕೆಲವೇ ಜನರಿಗೆ ಮೀಸಲಾತಿ ಇದೆ. ನಿಮ್ಮ ಪಾರ್ಟಿಯಾಗಲಿ, ನಮ್ಮ ಪಾರ್ಟಿಯಾಗಲಿ ಅವರದೇ ಒಂದು ಜಾತಿ ಇದೆ ಕೊ-ಆಪರೇಟರ್ಸದು. ಆದಕ್ಕೋಸ್ಕರ ಅವರು ಹೇಳಿದಹಾಗೆ ದಯವಿಟ್ಟು ಈ ಇಂಬ್ಯಾಲೆನ್ಸನ್ನು ದೂರ ಮಾಡುವುದಕ್ಕೆ ಆ ರಿಪೋರ್ಟನ್ನು ಇಂಪ್ಲಿಮೆಂಟ್ ಮಾಡುತ್ತೀರಾ ?

ಶ್ರೀ ಎಸ್. ಆರ್. ಬೊಮ್ಮಾಯಿ.—ಕಡಪಟ್ಟಿ ಕಮಿಟಿ ರಿಪೋರ್ಟ್ ಬಂದಿದೆ, ಅದನ್ನು ಪರಿಶೀಲನೆ ಮಾಡುವುದಕ್ಕೆ ಕ್ಯಾಬಿನೆಟ್ ಸಬ್‌ಕಮಿಟಿ ಮಾಡಿದ್ದೇವೆ, ಅವರು ಬೇಗ ನಿರ್ಣಯ ತೆಗೆದು ಕೊಳ್ಳುತ್ತಾರೆ.

ಶ್ರೀ ಎಂ. ಮಲ್ಲಿಕಾರ್ಜುನ ಖಾರ್ಗೆ.—ಆ ಕಮಿಟಿಯವರ ಮೊದಲನೇ ರಿಪೋರ್ಟ್ ಏನಿತ್ತು ಅದನ್ನು ಇಂಪ್ಲಿಮೆಂಟ್ ಮಾಡಿಲ್ಲ, ಆ ರಿಪೋರ್ಟ್ ಇಂಪ್ಲಿಮೆಂಟ್ ಆಗಿಲ್ಲ ಎಂದೂ ಅವರು ಎರಡನೇ ರಿಪೋರ್ಟ್ ಕೊಡತಕ್ಕಂಥ ಯೋಚನೆ ಮಾಡಿಲ್ಲ, ವೀಟಿಂಗ್ ಕರೆಯುತ್ತಾ ಇಲ್ಲ. ಫರ್ಸ್ಟ್ ರಿಪೋರ್ಟ್‌ಗೆ ಬೆಲೆ ಇಲ್ಲ ಅಂದಮೇಲೆ ಇನ್ನು ೨-ನೇ ರಿಪೋರ್ಟ್ ಕೊಡುವುದೇನು ಎನ್ನತಕ್ಕ ಭಾವನೆ ಕಮಿಟಿಗೂ ಬಂದಿದೆ.

ಶ್ರೀ ಎಸ್. ಆರ್. ಬೊಮ್ಮಾಯಿ.—ಇಂಟರಿಂ ರಿಪೋರ್ಟ್ ಇದೆ, ಕಾನೂನು ತೊಡಕುಗಳಿವೆ. ಕ್ಯಾಬಿನೆಟ್ ಸಬ್‌ಕಮಿಟಿಯವರು ಕನ್‌ಸೀಡರ್ ಮಾಡುತ್ತಿದ್ದಾರೆ.